## ಕರ್ನಾಟಕವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 975 |
| ಸದಸ್ಯರ ಹೆಸರು | ಶ್ರೀ ಗೋವಿಂದ ರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 17.12.2024 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ<br>ತೋಟಗಾರಿಕೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ತಾಲ್ಲೂಕಿನ ಮಠಪುರ ಮತ್ತು ಸೀತಿ ಗ್ರಾಮದ ಸಮೀಪದ ಬೆಟ್ಟದಲ್ಲಿ ಅಕ್ರಮ ಗಣಿಗಾರಿಕೆ, ಜಲ್ಲಿ ಕ್ರಷರ್ ನಿರ್ಮಾಣದ ಕೆಲಸ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | • ಕೋಲಾರ ಜಿಲ್ಲೆ ಮತ್ತು ತಾಲ್ಲೂಕಿನ ಸೀತಿ ಗ್ರಾಮದ ಸರ್ವೆ ನಂ.19ರ 06-00 ಎಕರೆ ಪ್ರದೇಶದಲ್ಲಿ ಮೆ\|\| ಕೇಶವ ಕನ್ ಸ್ಟ್ರಕ್ಷನ್ಸ್ ಅಗ್ರಿಗೇಟ್ಸ್ ಶ್ರೀ ಎಂ.ಸಿ.ನರೇಂದ್ರ ರವರಿಗೆ ದಿನಾಂಕ 04.12.2010 ರಿಂದ ಜಾರಿಗೆ ಬರುವಂತೆ 30 ವರ್ಷಗಳ ಅವಧಿಗೆ ಕಲ್ಲುಗಣಿ ಗುತ್ತಿಗೆ ಸಂಖ್ಯೆ 961ನ್ನು ಮಂಜೂರು ಮಾಡಲಾಗಿದ್ದು, ಪ್ರಸ್ತುತ ಸದರಿ ಗುತ್ತಿಗೆಯಲ್ಲಿ ಕಲ್ಲುಗಣಿ ಕಾರ್ಯ ನಡೆಸದೆ ನಿಷ್ಕ್ರಿಯಗೊಂಡಿರುತ್ತದೆ.<br>• ಕೋಲಾರ ತಾಲ್ಲೂಕು, ಸೀತಿ ಗ್ರಾಮದ ಸರ್ವೆ ನಂ. 383 ರಲ್ಲಿನ 1-38 ಎಕರೆ ಪಟ್ಟಾ ಭೂಮಿಯಲ್ಲಿ ಮೆ\|\| ಎಸ್.ಎಲ್.ವಿ. ಎಂಟರ್ ಪ್ರೈಸಸ್ ರವರು ಕಷರ್ ಘಟಕ ಸ್ಥಾಪಿಸಲು ದಿನಾಂಕ 11.08.2014 ರಂದು ಅರ್ಜಿ ಸಲ್ಲಿಸಿದ್ದು, ಸದರಿ ಪ್ರದೇಶದಲ್ಲಿ ಸ್ಟೋನ್ ಕ್ರಷರ್ ಲೈಸೆನ್ಸ್ ಮಂಜೂರಾತಿಗೆ ಸುರಕ್ಷಿತ ವಲಯ ಘೋಷಣೆ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.<br>• ಕೋಲಾರ ತಾಲ್ಲೂಕಿನ ಮಠಪುರ ಮತ್ತು ಸೀತಿ ಗ್ರಾಮಗಳ ಸಮೀಪದ ಬೆಟ್ಟದಲ್ಲಿ ಯಾವುದೇ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಸ್ಟೋನ್ ಕ್ರಷರ್ ಘಟಕಗಳ ನಿರ್ಮಾಣ ಕೆಲಸ ನಡೆಯುತ್ತಿರುವುದಿಲ್ಲ. |
| (ಆ) | ಹಾಗಿದ್ದಲ್ಲಿ ಯಾವ ಕಂಪನಿಯ ಮಾಲೀಕತ್ವದಲ್ಲಿ ನಡೆಯುತ್ತಿದೆ: ಹಾಗೂ ಕೋಲಾರ ಜಿಲ್ಲೆಯಲ್ಲಿ ಅಧಿಕೃತವಾಗಿ ಹಾಗೂ ಅನಧಿಕೃತ ವಾಗಿ ನಡೆಯುತ್ತಿರುವ - | • ಕೋಲಾರ ತಾಲ್ಲೂಕಿನ ಮಠಪುರ ಮತ್ತು ಸೀತಿ ಗ್ರಾಮಗಳ ಸಮೀಪದ ಬೆಟ್ಟದಲ್ಲಿ ಯಾವುದೇ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಸ್ಟೋನ್ ಕ್ರಷರ್ ಘಟಕಗಳ ನಿರ್ಮಾಣ ಕೆಲಸ ನಡೆಯುತ್ತಿರುವುದಿಲ್ಲ.<br>• ಕೋಲಾರ ಜಿಲ್ಲೆಯಲ್ಲಿ 03 ಅಲಂಕಾರಿಕ ಶಿಲೆ ಗುತ್ತಿಗೆ ಹಾಗೂ 128 ಕಟ್ಟಡಕಲ್ಲು ಗಣಿ ಗುತ್ತಿಗೆಗಳನ್ನು ನಿಯಮಾನುಸಾರ ಮಂಜೂರು ಮಾಡಲಾಗಿದ್ದು, ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ. |

. . . 2

-ಗಣಿಗಾರಿಕೆ ಪ್ರದೇಶಗಳು ಯಾವುವು:

| ಕ್ರ. ಸಂ. | ತಾಲ್ಲೂಕು | ಕಟ್ಟಡ ಕಲ್ಲು ಗಣಿ ಗುತ್ತಿಗೆ ಸಂಖ್ಯೆ | ವಿಸ್ತೀರ್ಣ (ಎಕರೆ ಗಳಲ್ಲಿ) | ಗ್ರಾನೈಟ್ ಕಲ್ಲು ಗಣಿ ಗುತ್ತಿಗೆ ಸಂಖ್ಯೆ | ವಿಸ್ತೀರ್ಣ (ಎಕರೆ ಗಳಲ್ಲಿ) |
|---|---|---|---|---|---|
| 1 | ಬಂಗಾರಪೇಟೆ | 01 | 2-00 | 0 | 00 |
| 2 | ಕೆ.ಜಿ.ಎಫ್ | 02 | 4-30 | 0 | 00 |
| 3 | ಕೋಲಾರ | 35 | 104-33 | 01 | 6-10 |
| 4 | ಮಾಲೂರು | 72 | 289-30 | 01 | 6-05 |
| 5 | ಮುಳಬಾಗಿಲು | 14 | 76-00 | 01 | 3-20 |
| 6 | ಶ್ರೀನಿವಾಸಪುರ | 04 | 20-29 | 0 | 00 |
| ಒಟ್ಟು | | 128 | 525-37 | 03 | 15-35 |

- ಕೋಲಾರ ಜಿಲ್ಲೆಯಲ್ಲಿ ಮೂರು ವರ್ಷಗಳಲ್ಲಿ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಪ್ರಕರಣಗಳನ್ನು ಪತ್ತೆ ಹಚ್ಚಿ, ಅಕ್ರಮ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ ಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ:

| ಕ್ರ. ಸಂ | ವರ್ಷ | ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (₹ಲಕ್ಷಗಳಲ್ಲಿ) | ದಾಖಲಿಸಿರುವ ಮೊಕದ್ದಮೆಗಳು |
|---|---|---|---|---|
| 1. | 2022-23 | 46 | 25.18 | 00 |
| 2. | 2023-24 | 28 | 25.04 | 01 |
| 3. | 2024-25 | 19 | 7.85 | 02 |
| ಒಟ್ಟು | | 93 | 58.07 | 03 |

ಇ) ಬಂಡೆಗಳನ್ನು ಸ್ಫೋಟಿಸಲು ಸಿಡಿಮದ್ದು ಉಪಯೋಗಿ ಸುತ್ತಿರುವುದು ಕಲ್ಲು ಬಂಡೆ ಗಳು ಸುಮಾರು ಒಂದರಿಂದ ಎರಡು ಕಿ.ಮೀ.ವರೆ ಗೂ ಕಲ್ಲು -

- ಕೋಲಾರ ಜಿಲ್ಲೆಯಲ್ಲಿ ಒಟ್ಟು 128 ಕಟ್ಟಡಕಲ್ಲು ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಈ ಪೈಕಿ 19 ಕಟ್ಟಡ ಕಲ್ಲು ಗುತ್ತಿಗೆಗಳಲ್ಲಿ ಮಾನವ ಶ್ರಮದಿಂದ ಚಪ್ಪಡಿ/ಸೈಜುಕಲ್ಲು ಉತ್ಪಾದನೆ ಮಾಡಲಾಗುತ್ತಿದೆ.
- ಉಳಿದ 109 ಕಟ್ಟಡ ಕಲ್ಲು ಗುತ್ತಿಗೆಗಳನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 6(2) ರಂತೆ ಸಾರ್ವಜನಿಕ ರಚನೆಗಳಿಂದ ನಿಯಂತ್ರಿತ ಸ್ಫೋಟಕ ಬಳಸಿ ಗಣಿಗಾರಿಕೆಗೆ 100 ಮೀಟರ್ ಹಾಗೂ ಸ್ಫೋಟಕ ಬಳಸಿ ಗಣಿಗಾರಿಕೆಗೆ 200 ಮೀಟರ್ ಅಂತರ ಕಾಯ್ದಿರಿಸಿಕೊಂಡು ಮಂಜೂರು ಮಾಡಲಾಗಿದೆ.
- ಕಲ್ಲುಗಣಿ ಗುತ್ತಿಗೆದಾರರು ಸ್ಫೋಟಕ ಬಳಕೆಗಾಗಿ Director General of Mines Safety (DGMS) ರವರಿಂದ ಸ್ಫೋಟಕ ಲೈಸೆನ್ಸ್ ಪಡೆದಿದ್ದು, ಗಣಿ ಕಾಯ್ದೆ, 1952 ರಂತೆ ನುರಿತ ಸ್ಫೋಟಕ ತಜ್ಞರನ್ನು ನೇಮಿಸಿಕೊಂಡು ಸ್ಫೋಟಕವನ್ನು ನಡೆಸುತ್ತಿರುತ್ತಾರೆ.

. . . 3

<table>
<tr><td></td><td>-ಚದುರುತ್ತಿದ್ದು, ಬಹಳಷ್ಟು ಮನೆಗಳಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>• ಜಿಲ್ಲೆಯಲ್ಲಿ ಕಲ್ಲು ಬಂಡೆಗಳು ಸುಮಾರು ಒಂದರಿಂದ ಎರಡು ಕಿ.ಮೀವರೆಗೂ ಚದುರಿ ಮನೆಗಳಿಗೆ ಹಾನಿಯಾಗಿರುವ ಪ್ರಕರಣಗಳು ವರದಿಯಾಗಿರುವುದಿಲ್ಲ.</td></tr>
<tr><td>ಈ)</td><td>ಕೋಲಾರ ಜಿಲ್ಲೆಯಲ್ಲಿ ಅಕ್ರಮವಾಗಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆಯ ಮೇಲೆ ಇದುವರೆಗೂ ಯಾವ ಕ್ರಮ ಕೈಗೊಳ್ಳಲಾಗಿದೆ. ಹಾಗೂ ಕಲ್ಲು ಗಣಿಗಾರಿಕೆಗೆ ಅನುಮತಿ ನೀಡುವ ಸಂದರ್ಭದಲ್ಲಿ ಸರ್ಕಾರ ಯಾವ ನೀತಿ ನಿಯಮಗಳನ್ನು ವಿಧಿಸುತ್ತದೆ?</td><td>• ಕೋಲಾರ ಜಿಲ್ಲೆಯಲ್ಲಿ ಮೂರು ವರ್ಷಗಳಲ್ಲಿ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಪ್ರಕರಣಗಳನ್ನು ಪತ್ತೆ ಹಚ್ಚಿ, ಅಕ್ರಮ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ:
<table>
<tr><th>ಕ್ರ. ಸಂ</th><th>ವರ್ಷ</th><th>ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ</th><th>ವಿಧಿಸಿದ ದಂಡ (₹ಲಕ್ಷಗಳಲ್ಲಿ)</th><th>ದಾಖಲಿಸಿರುವ ಮೊಕದ್ದಮೆಗಳು</th></tr>
<tr><td></td><td>2022-23</td><td>46</td><td>25.18</td><td>0</td></tr>
<tr><td></td><td>2023-24</td><td>28</td><td>25.04</td><td>01</td></tr>
<tr><td></td><td>2024-25</td><td>19</td><td>7.85</td><td>02</td></tr>
<tr><td colspan="2">ಒಟ್ಟು</td><td>93</td><td>58.07</td><td>03</td></tr>
</table>
• ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರಂತೆ ಹಾಗೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಆದೇಶದನುಸಾರ ಪರಿಸರ ಅನುಮತಿ ಪತ್ರದಲ್ಲಿನ ನಿಬಂಧನೆಗಳು ಹಾಗೂ ಕಲ್ಲುಗಣಿ ಗುತ್ತಿಗೆ ಕರಾರಿನಲ್ಲಿ ವಿಧಿಸಲಾಗುವ ಷರತ್ತು ಮತ್ತು ನಿಬಂಧನೆಗಳನುಸಾರ ರಾಜ್ಯದಲ್ಲಿ ಕಲ್ಲುಗಣಿ ಗುತ್ತಿಗೆ / ಲೈಸೆನ್ಸ್‌ಗಳನ್ನು ಮಂಜೂರು ಮಾಡಲಾಗುತ್ತದೆ.</td></tr>
</table>

ಸಂಖ್ಯೆಸಿಐ -ಎಂಎಂಎನ್/306/2024

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.